# ನೀರು: ಖಾಸಗೀಕರಣ ಸಲ್ಲದು

ಜಗತ್ತಿನ ನಾಗರಿಕತೆಗಳ ಉಗಮ ಮತ್ತು ಅಭಿವೃದ್ಧಿ, ನದಿಗಳ ತಟದಲ್ಲಿ ಆಗಿರುವುದನ್ನು ಚಾರಿತ್ರಿಕ ಕುರುಹುಗಳು ದಾಖಲಿಸಿವೆ. ನಾಗರಿಕತೆಗಳನ್ನು ನದಿ ಬಯಲುಗಳ ಹೆಸರಿನಲ್ಲಿಯೇ ಗುರುತಿಸಲಾಗುತ್ತಿದೆ. ನೀರು, ಬದುಕಿಗೆ ಅವಶ್ಯಕವಾದ ನೈಸರ್ಗಿಕ ಸಂಪತ್ತು. ಈ ಕಾರಣಕ್ಕಾಗಿ ನೀರನ್ನು ಜೀವಜಲ ಎಂದು ತುಂಬ ಅನ್ವರ್ಥಕವಾಗಿ ಬಣ್ಣಿಸಲಾಗಿದೆ. ಆದ್ದರಿಂದಲೇ ಜೀವನ ಮೌಲ್ಯಗಳ ಬಗ್ಗೆ ವಿಶೇಷ ಆದ್ಯತೆ ನೀಡಿರುವ ಭಾರತೀಯ ಸಮಾಜ, ನೀರಿನ ಪೂರೈಕೆ ಯಾವುದೇ ಆಡಳಿತ ವ್ಯವಸ್ಥೆಯ ಆದ್ಯ ಕರ್ತವ್ಯವೆಂದು ಪರಿಗಣಿಸಿದೆ. ಅದು ಸ್ವತಂತ್ರ ಭಾರತದಲ್ಲಿಯೂ ಎಲ್ಲ ಸರ್ಕಾರಗಳ ಪ್ರಾಥಮಿಕ ಜವಾಬ್ದಾರಿಯಾಗಿದೆ. ಬದುಕಿನ ಅವಶ್ಯಕತೆಗಳಾದ ನೀರು ಮತ್ತು ಸೂರು, ನಮ್ಮದೇ ಆಡಳಿತ ವ್ಯವಸ್ಥೆಯಲ್ಲಿ ನ್ಯಾಯಯುತವಾಗಿ, ವೈಯಕ್ತಿಕ ಹಕ್ಕಿನಂತೆ ಸಿಗಬೇಕು ಎಂಬ ನಿರೀಕ್ಷೆ ಜನತೆಯಲ್ಲಿದೆ. ನೀರಿನ ಪೂರೈಕೆಯಂತೂ ಯಾವ ಆಡಳಿತ ವ್ಯವಸ್ಥೆಯೂ ನಿರ್ವಹಿಸಲೇಬೇಕಾದ ಸಾರ್ವಜನಿಕ ಕರ್ತವ್ಯ, ಸೇವೆ.

ಎರಡು ದಶಕಗಳಿಂದ ದೇಶದಲ್ಲಿ ಅನುಷ್ಠಾನಕ್ಕೆ ಬಂದಿರುವ ಜಾಗತೀಕರಣ ಪ್ರಕ್ರಿಯೆ ದೇಶದ ಸಾಮಾನ್ಯ ಆಡಳಿತ ಚಿಂತನೆಯನ್ನು ಪ್ರಭಾವಿಸಿದೆ. ಜಾಗತೀಕರಣಕ್ಕೆ ಒತ್ತಾಸೆಯಾಗಿ ಉದಾರೀಕರಣ ಮತ್ತು ಇದಕ್ಕೆ ಪೂರಕವಾಗಿ ಖಾಸಗೀಕರಣ ಎಂಬುದು ಆಡಳಿತ ಸೂತ್ರ ಹಿಡಿದವರ ರಾಜಕೀಯ ಚಿಂತನೆ. ಇದು ಹೊರದೇಶಗಳಲ್ಲಿನ ಆಡಳಿತ ನಿರ್ವಹಣೆಯ ವಿಧಾನಗಳನ್ನು ಅನುಕರಿಸುವ ಸುಲಭ ಮಾರ್ಗಕ್ಕೂ ಆಸ್ಪದ ಕಲ್ಪಿಸಿದೆ. ದೇಶದ ಪ್ರಾಕೃತಿಕ ಸ್ವರೂಪ, ನೈಸರ್ಗಿಕ ಸಂಪತ್ತಿನ ಲಭ್ಯತೆ, ಜನರ ಜೀವನ ವಿಧಾನ–ಶೈಲಿ, ನಂಬುಗೆ, ಆಚರಣೆ ಇತ್ಯಾದಿ ಅಂಶಗಳನ್ನು ಲೆಕ್ಕಿಸದೆ ಬೇರೆ ಎಲ್ಲೋ ಯಶಸ್ವಿಯಾದ ವ್ಯವಸ್ಥೆಯನ್ನು ಜಾರಿಗೊಳಿಸಲು ಯತ್ನಿಸುವುದು ಅಸಂಗತ ಎಂಬುದು ಈಗಿನ ಆಡಳಿತ ವ್ಯವಸ್ಥೆಯ ಅರಿವಿಗೆ ಬರುತ್ತಿಲ್ಲ. ಸ್ವತಂತ್ರ ಚಿಂತನೆ ಇಲ್ಲದ, ಬೌದ್ಧಿಕ ದಿವಾಳಿತನವನ್ನು ಬಿಂಬಿಸುವ ಆಡಳಿತ ವಿಧಾನಗಳು ಸಾರ್ವಜನಿಕ ಬದುಕಿನಲ್ಲಿ ಸಂಘರ್ಷಕ್ಕೆ ದಾರಿ ಮಾಡಿಕೊಡುತ್ತಿವೆ. ಇದಕ್ಕೊಂದು ನಿದರ್ಶನ ಕುಡಿಯುವ ನೀರಿನ ಪೂರೈಕೆಯ ಹೊಣೆಯನ್ನು ಖಾಸಗಿ ಸಂಸ್ಥೆಗಳಿಗೆ ವಹಿಸಿಕೊಡುವ ಆಡಳಿತಗಾರರ ಚಿಂತನೆ.

ನಾಗರಿಕ ಸರ್ಕಾರ ಸಾರ್ವಜನಿಕ ಬದುಕಿಗೆ ಬೇಕಾದ ಎಲ್ಲವನ್ನೂ ತಾನೇ ಒದಗಿಸಲು ಮುಂದಾಗಬಾರದು; ಇದರಲ್ಲಿ ಖಾಸಗಿಯವರು ತಮ್ಮ ವೈಯಕ್ತಿಕ ಸಂಪನ್ಮೂಲವನ್ನು ಒದಗಿಸಿ ಪಾಲುಗೊಳ್ಳಲು ಅವಕಾಶ ಇರಬೇಕು ಎಂಬುದು ಜಾಗತೀಕರಣದ ಸ್ಥೂಲ ಚಿಂತನೆ. ಅದರಂತೆ ಸಾರ್ವಜನಿಕ ಸೇವೆಗಳಲ್ಲಿ ಕೆಲವನ್ನು– ಸಾರಿಗೆ, ಸಂವಹನ, ಸಂಪರ್ಕ, ಅಗತ್ಯ ವಸ್ತುಗಳ ಉತ್ಪಾದನೆ, ಪೂರೈಕೆ ಇತ್ಯಾದಿಗಳನ್ನು– ಖಾಸಗಿಯವರು ದೇಶದ ಕಟ್ಟಳೆಗಳಿಗೆ ಅನುಗುಣವಾಗಿ ನಿರ್ವಹಿಸಿ ಅದರಲ್ಲಿ ತಮ್ಮ ವ್ಯಾಪಾರ ವಹಿವಾಟುಗಳನ್ನು ಹೆಚ್ಚಿಸಿಕೊಳ್ಳಬಹುದು. ಸಾರ್ವಜನಿಕ ಮತ್ತು ಖಾಸಗಿ ಸಹಭಾಗಿತ್ವದ ಮಿಶ್ರ ಆರ್ಥಿಕತೆ ಅನುಷ್ಠಾನ ಇರುವ ಅನೇಕ ದೇಶಗಳಲ್ಲಿ ಯಶಸ್ವಿಯಾದ ಪದ್ಧತಿ ಇದು. ಬಹುತೇಕ ಎಲ್ಲ ಪ್ರಜಾಸತ್ತಾತ್ಮಕ ಆಡಳಿತ ವ್ಯವಸ್ಥೆಗಳಲ್ಲಿಯೂ ಇರುವ ಈ ಪದ್ಧತಿ ಎಲ್ಲ ಸೇವೆಗಳಿಗೂ ಅನ್ವಯವಾಗಲಾರದು. ಕೆಲವಾದರೂ ಕರ್ತವ್ಯಗಳನ್ನು ನಾಗರಿಕ ಆಡಳಿತ ನಿರ್ವಹಿಸಲೇ ಬೇಕಾಗುತ್ತದೆ. ಅದರಲ್ಲಿಯೂ ಬದುಕಿಗೆ ಅತಿ ಅವಶ್ಯವಾದ ನೀರು ಪೂರೈಕೆಯಂಥ ಮಹತ್ವದ ಹೊಣೆಗಾರಿಕೆಯನ್ನು ಖಾಸಗಿಯವರ ಕೈಗೆ ಒಪ್ಪಿಸುವುದು ಜನರಿಂದ, ಜನರಿಗಾಗಿ ಇರುವ ಆಡಳಿತ ವ್ಯವಸ್ಥೆಯ ಮೂಲ ಆಶಯವನ್ನೇ ಧಿಕ್ಕರಿಸುತ್ತದೆ. ಆಹಾರ ಮತ್ತು ಶಿಕ್ಷಣವನ್ನು ಪಡೆಯುವುದು ಜನತೆಯ ಹಕ್ಕು ಎನ್ನುವ ಉದಾತ್ತ ಚಿಂತನೆಗೆ ಕಾಯ್ದೆಯ ಸ್ವರೂಪವನ್ನು ನೀಡಲು ಮುಂದಾಗಿರುವ ಈಗಿನ ಆಡಳಿತ ವ್ಯವಸ್ಥೆ ತನ್ನ ಆದ್ಯ ಕರ್ತವ್ಯಗಳನ್ನು ಬೇರೆಯವರು ನಿರ್ವಹಿಸುವುದಕ್ಕೆ ಅವಕಾಶ ಕೊಡಬಾರದು. ಅದು ಕರ್ತವ್ಯಚ್ಯುತಿ ಮತ್ತು ಜನರನ್ನು ಖಾಸಗಿಯವರ ವ್ಯಾವಹಾರಿಕ ಮರ್ಜಿಗೆ ಒಪ್ಪಿಸಿ ಬಿಡುವ ಹೊಣೆಗೇಡಿತನ.

ಕುಡಿಯುವ ನೀರು ಪೂರೈಕೆಯ ಕೆಲಸ ಲಾಭ ನಷ್ಟವನ್ನು ಆಧರಿಸಿದ ವ್ಯವಹಾರವಾಗಬಾರದು. ಪ್ರತಿ ವ್ಯಕ್ತಿಗೆ ದಿನಕ್ಕೆ ಎಷ್ಟು ನೀರು ಅವಶ್ಯಕ ಎಂಬುದನ್ನು ವಿಶ್ವಸಂಸ್ಥೆಯೇ ನಿಗದಿಪಡಿಸಿದೆ. ಇದಕ್ಕೆ ಕಾರ್ಯಸಾಧು ಯೋಜನೆಗಳನ್ನು ರೂಪಿಸಿಕೊಂಡು ಅದನ್ನು ಒದಗಿಸುವುದು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಕರ್ತವ್ಯ. ಇದರಲ್ಲಿ ತಪ್ಪಿಸಿಕೊಳ್ಳುವ ಯತ್ನ ಜನತೆಗೆ ಎಸಗುವ ದ್ರೋಹ. ಇದನ್ನು ಯಾವ ನಾಗರಿಕ ಸರ್ಕಾರವೂ ಮಾಡಬಾರದು.

■ ಲಕ್ಷ್ಮಣ ಕೊಡಸೆ

ನಾಗರಿಕ ಸರ್ಕಾರ ಸಾರ್ವಜನಿಕ ಬದುಕಿಗೆ ಬೇಕಾದ ಎಲ್ಲವನ್ನೂ ತಾನೇ ಒದಗಿಸಲು ಮುಂದಾಗಬಾರದು; ಇದರಲ್ಲಿ ಖಾಸಗಿಯವರು ತಮ್ಮ ವೈಯಕ್ತಿಕ ಸಂಪನ್ಮೂಲವನ್ನು ಒದಗಿಸಿ ಪಾಲುಗೊಳ್ಳಲು ಅವಕಾಶ ಇರಬೇಕು ಎಂಬುದು ಜಾಗತೀಕರಣದ ಸ್ಥೂಲ ಚಿಂತನೆ. ಅದರಂತೆ ಸಾರ್ವಜನಿಕ ಸೇವೆಗಳಲ್ಲಿ ಕೆಲವನ್ನು – ಸಾರಿಗೆ, ಸಂವಹನ, ಸಂಪರ್ಕ, ಅಗತ್ಯ ವಸ್ತುಗಳ ಉತ್ಪಾದನೆ, ಪೂರೈಕೆ ಇತ್ಯಾದಿಗಳನ್ನು – ಖಾಸಗಿಯವರು ದೇಶದ ಕಟ್ಟಳೆಗಳಿಗೆ ಅನುಗುಣವಾಗಿ ನಿರ್ವಹಿಸಿ ಅದರಲ್ಲಿ ತಮ್ಮ ವ್ಯಾಪಾರ ವಹಿವಾಟುಗಳನ್ನು ಹೆಚ್ಚಿಸಿಕೊಳ್ಳಬಹುದು.

